Reg No. B G 155 22-8-1969

52nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋವಿವಾ ಸಂಚಿಕೆ ವರ್ಷಕ್ಕೆ ರೂ 2

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ನಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಸೆ.ಸೆ

ರಾಜೀನಾಮೆ ಕೊಡಬೇಕಾಗಿಲ್ಲವೆಂದು ನಿಜಲಿಂಗಪ್ಪ

ಸಿಂಹಳದಿಂದ ನಿರ್ಗಮಿಕರು

ನವದೆಹಲಿ— ಸಿಂಹಳದಿಂದ ಚರುನ ನಿರ್ಗಮಿಕರನ್ನು ಧನುಷ್ಕೋಟಿ ಮತ್ತು ರಾಮೇಶ್ವರಗಳಲ್ಲಿ ಸ್ವಾಗತಿಸುವುದು. ಅವರನ್ನು ಮಂಟಪಂಗೆ ಕರೆತರುವುದು ಇವೇ ಮೊದಲಾದ ವ್ಯವಸ್ಥೆಗಳನ್ನು ಬೆಂಗಳೂರಿನಲ್ಲಿ ತಾ || 29 ರಂದು ನಡೆಯುವ ಪುನರ್ವಸತಿ ಮಂಡಳಿ ಸಭೆಯಲ್ಲಿ ಪರ್ಯಾಲೋಚಿಸಲಾಗುವುದು.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು. ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ. ಸಿ. ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈತೇರುವಿಂದು ತತ್ಕೃಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4

ಪುರಸಭೆ

ಮೈಸೂರು— ಈ ಮಾಹೆಯ ಪುರಸಭಾ ಅಧಿವೇಶನವು ತಾ|| 30 ಶನಿವಾರ ಮಧ್ಯಾಹ್ನಾತ್ಪರ 4 ಗಂಟೆಗೆ ನಡೆಯುವುದು

★

ನೀರಿನ ತಾತ್ಪತ್ರಯ

ತಿರುಪತಿ— ನೀರಿನ ಪರಿಸ್ಥಿತಿ ಉತ್ಕಟವಾಗಿದೆ : ಜನರು, ಊರಲ್ಲೂ ಪುಹಿಳೆಯರು ತಮಗೆ ಒಂದು ಕೊಡ ನೀರಾದರೂ ಸಿಕ್ಕಲೆಂದು ರಸ್ತೆಗಳಲ್ಲಿ ಸುತ್ತಾಡುತ್ತಾ ಭಾವಿಗಳನ್ನು ಹುಡುಕುತ್ತಿರುವರು.

★

ಶ್ರೀ ಗಿರಿಯವರನ್ನು ಸನ್ಮಾನಿಸಲು

ಬೆಂಗಳೂರು— ರಾಷ್ಟ್ರಾಧ್ಯಕ್ಷರಾಗಿ ಚುನಾಯಿತರಾಗಿರುವ ಶ್ರೀ ಗಿರಿಯವರನ್ನು ಸನ್ಮಾನಿಸಲು ಮೈಸೂರು ಶಾಸಕರ ಸಭೆ ಏರ್ಪಡಿಸಿದೆ.

★

ಎಲ್ಲೀ ಹಣ

ನವದೆಹಲಿ— ಶ್ರೀಮತಿ ಅರುಣ ಅಸಫಾಲಿಯವರಿಗೆ ಎಲ್ಲಿಂದ ಹಣ ಬರುವುದೆಂಬುದನ್ನು ತನಿಖೆ ಮಾಡಲು ರಾಜ್ಯಸಭೆಯಲ್ಲಿ ಸದಸ್ಯರೊಬ್ಬರು ಕೇಳಿಕೆಹಾಕಿದರು — ಸತಿ ಅಸಫಾಲಿಯವರು ರೂ 17 ಲಕ್ಷದಿಂದ 18 ಲಕ್ಷದಷ್ಟು ಆಯಸೀನಾ ಪ್ರಕಾಶನ ಎಂಬ ಸಂಸ್ಥೆ ಹೊಂದಿದ್ದು, ಅದು ಲಿಂಕ್ ಮತ್ತು ಪೇಟ್ರಿಯಟ್ ಪತ್ರಿಕೆಗಳನ್ನು ಹೊರಡಿಸುತ್ತಿದೆ ಎಂದು ಲೋಕಸಭೆಯಲ್ಲಿ ತಿಳಿಸಲಾದ ವಿಷಯವನ್ನು ರಾಜ್ಯಸಭೆಯಲ್ಲಿ ಶ್ರೀ ಮಿಶ್ರ ತಿಳಿಸಿ, ಇದು ರಷ್ಯಾದಿಂದ ಬರುವ ಹಣವೆಂದೂ, ಈ ಬಗ್ಗೆ ತನಿಖೆ ನಡೆಯಬೇಕೆಂದೂ ಹೇಳಿದರು.

●

ಸ್ಮಾರಕ ಅಂಚೆಚೀಟಿ

ವೀರ ಸಾರ್ವಕರ್ಕರರ ಸ್ಮಾರಕ ಅಂಚೆಚೀಟಿಯನ್ನು 1970 ರಲ್ಲಿ ಹೊರಡಿಸಲು ಸರ್ಕಾರ ನಿರ್ಧರಿಸಿದೆ.

ಸ್ತುತ್ಯ ಯೋಚನೆ

ಬೆಂಗಳೂರು— ಯುವಕ ಕಾಂಗ್ರೆಸ್ ಚಟುವಟಿಕೆಯನ್ನು ಪ್ರತಿ ಗ್ರಾಮಕ್ಕೂ ಹರಡಲು ಪ್ರದೇಶ ಕಾಂಗ್ರೆಸ್ ಸಮಿತಿ ಯೋಚಿಸಿರುವುದಾಗಿ ಎಂ ಪಿ ಸಿ ಸಿ ಅಧ್ಯಕ್ಷ ಡಾ || ನಾಗಪ್ಪ ಆಳ್ವಾರರು ಹೇಳಿದರು.

●

ಚೀಣಾ ಅಕ್ಕಿ ವಶ

ನವದೆಹಲಿ— ಕೆಲವು ನೇಪಾಳಿ ವಾಣಿಜ್ಯೋದ್ಯಮಿಗಳು ನೇಪಾಳದಿಂದ ಚಂಪರಾನಿಗೆ, ಕೇರಳಕ್ಕೆ ಸಾಗಿಸಲು ತಂದಿದ್ದ ಲೆಕ್ಕವಿಲ್ಲದಷ್ಟು ಚೀಲದ ಚೀಣಾ ಅಕ್ಕಿಯನ್ನು ಬೀಹಾರು ಅಧಿಕಾರಿಗಳು ಹಿಡಿದರು.

★

ಅಕ್ರಮ ಸಾಗಾಣಿಕೆ

ಹೈದರಾಬಾದು— ರೂ. 112000 ಬೆಲೆಯ 100 ಕ್ವಿಂಟಾಲ್ ಅಕ್ಕಿಯ ಅಕ್ರಮ ಸಾಗಣಿಕೆಗಾಗಿ ಗುಲ್ಬರ್ಗಾದ ಒಬ್ಬ ವಾಣಿಜ್ಯೋದ್ಯಮಿ ದಸ್ತಗಿರಿ ಮಾಡಲ್ಪಟ್ಟು, ಅಕ್ಕಿಮೂಟೆಗಳೂ, ಲಾರಿ, ಒಂಕಾರು ವಶಪಡಿಸಿಕೊಳ್ಳಲಾಯಿತು.

★

ಗಿರಿಯವರ ವಿಜಯದ ಸಂತಸ

ಹಿಜಾಪುರದ ಜನತೆ ಶ್ರೀ ಗಿರಿಯವರು ಆಯ್ಕೆಯಾದದ್ದನ್ನು ಸ್ವಾಗತಿಸಿ ಕಮ್ಯೂನಿಸ್ಟು ಪಾರ್ಟಿ ಆಶ್ರಯದಲ್ಲಿ ಮಧ್ಯರಾತ್ರಿಯಲ್ಲಿ ಮೆರವಣಿಗೆ ನಡೆಸಿದರು.

★

ನಾಯಕರನ್ನು ಬಲಪಡಗೊಳ್ಳಿ

ನವದೆಹಲಿ— ನಿಮ್ಮ ನಾಯಕರು ಪ್ರಧಾನಿ ಇಂದಿರಾರವರನ್ನು ಒಲಪಡಗೊಳ್ಳಿ, ಎಂಬ ಅರ್ಥ ಪುಟದ ಜಾಹಿರಾತು ಅನೇಕ ಪತ್ರಿಕೆಗಳಲ್ಲಿ ಪ್ರಕಟವಾಗಿರುವವರ ಬಗ್ಗೆ ಪಣ ಎಲ್ಲಿಯದೆಂದು ಲೋಕಸಭೆಯಲ್ಲಿ ಕೇಳಿದ್ದನ್ನು ಸ್ಪೀಕರರು ತಿರಸ್ಕರಿಸಿದ್ದಕ್ಕೆ ಸಭಾತ್ಯಾಗ ಮಾಡಿದರು.

ಪ್ರಧಾನಿಯರ ವಿರುದ್ಧ

ನವದೆಹಲಿ— ಪ್ರಧಾನಿ ಇಂದಿರಾರ ವಿರುದ್ಧ ಪಾರ್ಟಿ ಶಿಸ್ತು ಜಾರಿಗೆ 130 ಮಂದಿ ಪಾರ್ಲಿಮೆಂಟಿನ ಕಾಂಗ್ರೆಸ್ ಸದಸ್ಯರು ತಮ್ಮ ನಿರ್ಣಯವನ್ನು ಕಾಂಗ್ರೆಸ್ ಅಧ್ಯಕ್ಷರಿಗೆ ತಲಪಿಸಿರುವರು.

●

ಪ್ರಧಾನಿ ಪದವಿ ತ್ಯಜಿಸಿ

ನವದೆಹಲಿ— ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಈಚಿನ ಪಾರ್ಟಿಯಲ್ಲಿನ ನಡವಳಿಗಳನ್ನು ಬೇಗನೇ ಪರಿಶೀಲಿಸುವುದರಿಂದ, ಇಂದಿರಾರವರು ಪ್ರಧಾನಿಯಾಗಿ 1972 ರನರಿಗೆ ಇರುವ ವಿಷಯದಲ್ಲಿ ತಾವು ಭರವಸೆ ಕೊಡಲಾರೆನೆಂದು ಕಾಂಗ್ರೆಸ್ ಅಧ್ಯಕ್ಷ ನಿಜಲಿಂಗಪ್ಪನವರು ಹೇಳಿದರು — ತಾವು ಕಾಂಗ್ರೆಸ್ ಅಧ್ಯಕ್ಷತೆಗೆ ರಾಜೀನಾಮೆ ಕೊಡುವೆನೆಂಬ ವರದಿಯನ್ನು ನಿರಾಕರಿಸಿ, ಈಗ ಆದಕ್ಕೆ ಅವಶ್ಯಕತೆ ಇಲ್ಲವೆಂದರು.

★

ರೇಸ್‌ಕೋರ್ಸ್ ವರ್ಗಾವಣೆ

ಬೆಂಗಳೂರು— ಇಲ್ಲಿಯ ರೇಸ್ ಕೋರ್ಸನ್ನು ಬೇಕಡೆಗೆ 5 ವರ್ಷಗಳಲ್ಲಿ ಬದಲಾಯಿಸಲಾಗುವುದೆಂದು ಶಾಸನಸಭೆಯಲ್ಲಿ ತಿಳಿಸಲಾಯಿತು — ಕುದುರು ಜೂಜಿನಿಂದ ತೆರಿಗೆಯಾಗಿ ಸರಕಾರಕ್ಕೆ 66-67 ರಲ್ಲಿ ರೂ 3731333, 67-68 ರಲ್ಲಿ ರೂ. ರೂ 4611849, 68-69 ರಲ್ಲಿ ರೂ. 6130535 ಆದಾಯ ಬಂದಿದೆಯೆಂದೂ ತಿಳಿಸಲಾಯಿತು.

★

ಶಿವಪ್ಪನಾಯ್ಕನ ಸ್ಟ್ಯಾಚು

ಶಿವಮೊಗ್ಗ— ಪೌರಸಭೆಯು ಅನೇಕ ವರ್ಷಗಳ ಹಿಂದೆ ನಿರ್ಣಯಿಸಿರುವಂತೆ ಅವಿಭಾಜ್ಯ ಅಹಮದ್ ಸರ್ಕಲ್‌ನಲ್ಲಿ ಶಿವಪ್ಪನಾಯಿಕನ ಸ್ಟ್ಯಾಚೂ ಇಡವಿದ್ದರೆ ತಾವು ನೇರ ಕಾರ್ಯಾಚರಣೆ ಕೈಗೊಳ್ಳುವುದಾಗಿ ಇಲ್ಲಿಯ ಹಿಂದೂ ಮಹಾಸಭೆ ನಿರ್ಣಯಿಸಿ ಪೌರಸಭೆಗೆ ಬೆದರಿಕೆ ಹಾಕಿದೆ.

ನಾರ್ತವಿಶೇಷಗಳು

ಪಾರ್ಟಿ ವಿರುದ್ಧ ಕೆಲಸಮಾಡಿದವರಿಗೆ

ಬೆಂಗಳೂರು— ಪಾರ್ಟಿ ವಿರುದ್ಧ ವರ್ತಿಸಿರುವವರ ಮೇಲೆ ಶಿಸ್ತು ಕ್ರಮ ಕೈಗೆಳ್ಳಬೇಕೆಂದು ಕಾಂಗ್ರೆಸ್ ಅಧ್ಯಕ್ಷರಿಗೆ ಮೈಸೂರಿನ 90 ಶಾಸಕರೂ, ಮತ್ತು ಅನೇಕ ಜಿಲ್ಲೆಯ ಹಲವು ಏ ಐ ಸಿ ಸಿ ಮತ್ತು ಎಂ ಪಿ ಸಿ ಸಿ ಸದಸ್ಯರು ಬರೆದಿರುವರು.

ರಾಜ್ಯ ಸರಕಾರಗಳಿಗೆ ಪ್ರಧಾನಿಯವರ ಸೂಚನೆ

ನವದೆಹಲಿ— ಭೂ ಪರಿಮಿತಿ ಶಾಸನವನ್ನು ಭದ್ರವಾಗಿ ಜಾರಿ ಮಾಡಿ, ಉಳಿತಾಯವನ್ನು ಭೂಮಿ ಇಲ್ಲದ ರೈತರಿಗೆ ಹಂಚುವಂತೆ ರಾಜ್ಯ ಸರಕಾರಗಳನ್ನು ಪ್ರಧಾನಿ ಇಂದಿರಾರವರು ಒತ್ತಾಯ ಮಾಡಿರುವರು

1400 ವರ್ಷದ ಮಸೀದಿ

ಜರೂಸೆಲಂ— ಇಸ್ರೇಲಿಯರಿಂದ ಅಗ್ನಿ ಅನಾಹುತಕ್ಕೆ ತುತ್ತಾದ ನಗರದ 1400 ವರ್ಷದ ಅಲ್ ಅಕ್ಸ ಮಸೀದಿಯು ಮಿಕ್ಕಾ, ಮೆಡೀನಾ ನಂತರ ಮುಸ್ಲಿಂರಿಗೆ ಮೂರನೇ ಪವಿತ್ರ ಸ್ಥಳವೆಂದು ಹೇಳಲಾಗಿದೆ.

ಉದ್ಯೋಗಕ್ಕೆ ಆಕಾಂಕ್ಷೆ

ನವದೆಹಲಿ— ಜಪಾನಿನಲ್ಲಿ ನಡೆಯುವ ಎಕ್ಸ್‌ಪೊ 70 ವಾಣಿಜ್ಯ ಮೇಳದಲ್ಲಿ ಭಾರತ ಭಾಗವಹಿಸುವುದು. ಅಲ್ಲಿ ಮಹಿಳಾ ಮಾರ್ಗದರ್ಶಿದೆಗಳಿಗಾಗಿ ಪ್ರಕಟಿಸಿದ ಜಾಹಿರಾತಿಗೆ 1760 ಮಹಿಳೆಯರು ಅರ್ಜಿ ಹಾಕಿದರು. ಈ ಪೈಕಿ 175 ಅಭ್ಯರ್ಥಿಗಳನ್ನು ಆಯ್ಕೆ ಮಂಡಲಿ ಸಂದರ್ಶಿಸಿ, 33 ಮಂದಿಯನ್ನು ಪಟ್ಟಿಯಲ್ಲಿ ಸೇರಿಸಲಾಯಿತು.

★ ವಿಶ್ವಸಂಸ್ಥೆಯಲ್ಲಿ ಭಾರತದ ಅಧ್ಯಕ್ಷ ಚುನಾವಣೆ ಬಗ್ಗೆ ರಾಜಕಾರಣಿಗಳು ಸಂತೃಪ್ತಿ ವ್ಯಕ್ತಪಡಿಸಿರುವರು.

Golden Jubilee of 'Satyavadi'

The golden jubilee of the 'Satyavadi' is to be celebrated very soon

The President. the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid

Rajasabha-bhushana Sri F. K. Irani, Sri M. B. Basaviah Sri Madhav Shenoi Sri Opera Talkies. Padmabhushana Dr. M.C. Modi, Dr. R S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

ಪುಡ್‌ಲ್ಯಾಂಡ್ ಜಯಪ್ರದ 5 ನೇ ವಾರ

— ಮನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಇಂತಕಾಮ್ INTAQAM

ಪಾತ್ರ– ಸಂಜಯ್, ಸಾಧನ, ರಾಜೇಂದ್ರನಾಥ್, ಹೆಲೆನ್

ರಹೆಮ್ಮಾನ್, ಅಶೋಕುಮಾರ್

ಸಂಗೀತ : ಲಕ್ಷ್ಮೀಕಾಂತ್ – ಪ್ಯಾರೇಲಾಲ್

[ದಿನ 3 ಪ್ರದರ್ಶನಗಳು]

ಆಪೆರಾ— ತಾ. 15–8–69 ರಿಂದ

ಅಮೋಘ ಆಕರ್ಷಣೀಯ ಹಿಂದಿ ಚಿತ್ರ — ಈಸ್ಟ್‌ಮನ್ ಕಲರ್

ನಪ್‌ನೋನ್ ಕ ಸೌದಾಗರ್

ನಟವರ್ಗ— ರಾಜಕಪೂರ್, ಹೇಮಮಾಲಿನಿ

ಸಂಗೀತ : ಶಂಕರ್ ಜೈಕಿಷನ್

ದಿನ 3 ಆಟಗಳು

Quality Printing — Neat Binding

Lakshminarasimha Press

Sivarampet, Mysore

Help The Gorakshana



ಗೋರಕ್ಷಣೆ ಮತ್ತು ಪಶುಸಂಪತ್ತಿನ ಅಭಿವೃದ್ಧಿ ಕಾರ್ಯಗಳು ಹೆಚ್ಚಿನ ಪ್ರಮಾಣದಲ್ಲಿ ನಡೆಯಲಿ

ಗೋದಕ್ಷಿಣೆಗೆ ಬೆಂಬಲ ನೀಡಿ

Protect the Cow

SHAKTI SUDHA

A Superb Tonic

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4